ನಿಮ್ಮೊಡನೆ

# ನಾಡಧ್ವಜ ಕನ್ನಡಿಗರ ಹೆಮ್ಮೆಯಾಗಲಿ

ರಾಜ್ಯಕ್ಕೆ ಒಂದು ಪ್ರತ್ಯೇಕ ಶಾಸನಬದ್ಧ ಧ್ವಜ ಇರಬೇಕೆ. ಎನ್ನುವುದೀಗ ಚರ್ಚೆಯ ವಿಷಯವಾಗಿದೆ. ಕರ್ನಾಟಕಕ್ಕೆ ಪ್ರತ್ಯೇಕವಾದ ಧ್ವಜವೊಂದನ್ನು ರೂಪಿಸಿ ಅದಕ್ಕೆ ಶಾಸನಬದ್ಧ ಸ್ಥಾನಮಾನ ನೀಡುವ ಬಗ್ಗೆ ಅಧ್ಯಯನ ನಡೆಸಲು ರಾಜ್ಯ ಸರ್ಕಾರ ಒಂಬತ್ತು ಸದಸ್ಯರ ಸಮಿತಿಯೊಂದನ್ನು ರಚಿಸಿದೆ. ಈ ಸಮಿತಿ ಅಧ್ಯಯನ ಶುರು ಮಾಡುವುದಕ್ಕೆ ಮುನ್ನವೇ ಪ್ರತ್ಯೇಕ ಧ್ವಜಕ್ಕೆ ರಾಜಕೀಯ ವಿರೋಧ ವ್ಯಕ್ತವಾಗಿದೆ. ರಾಜ್ಯಕ್ಕೆ ಪ್ರತ್ಯೇಕ ಧ್ವಜವನ್ನು ರೂಪಿಸಿದರೆ ಅದು ರಾಷ್ಟ್ರದಲ್ಲಿ ಪ್ರತ್ಯೇಕತೆಗೆ ಇಂಬು ಕೊಡುತ್ತದೆ ಎನ್ನುವುದು ಅದನ್ನು ವಿರೋಧಿಸುವವರ ವಾದ. ಇದನ್ನು ವಿರೋಧಿಸುವವರಲ್ಲಿ ರಾಜ್ಯದ ಬಿಜೆಪಿ ನಾಯಕರು ಮಾತ್ರವಲ್ಲ, ಕಾಂಗ್ರೆಸ್‌ನ ದೆಹಲಿ ನಾಯಕರೂ ಇದ್ದಾರೆ ಎನ್ನುವುದು ಕುತೂಹಲಕರ.

ರಾಷ್ಟ್ರದ ಏಕತೆ ಮತ್ತು ಸಮಗ್ರತೆ ಎಲ್ಲಕ್ಕಿಂತ ಮುಖ್ಯ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ರಾಜ್ಯಕ್ಕೊಂದು ಪ್ರತ್ಯೇಕ ಧ್ವಜ ರೂಪಿಸಿದರೆ ಅದರಿಂದ ದೇಶದ ಏಕತೆಗೆ ಹೇಗೆ ಭಂಗ ಬರುತ್ತದೆ ಎನ್ನುವುದು ಗೊತ್ತಾಗುತ್ತಿಲ್ಲ. ಈಗಾಗಲೆ ಕೆಂಪು ಮತ್ತು ಹಳದಿ ಬಣ್ಣದ ಕನ್ನಡ ಧ್ವಜವೊಂದು ರಾಜ್ಯದಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿದೆ. ಕನ್ನಡಪರ ಸಂಘಟನೆಗಳು ಮತ್ತು ಬಹುತೇಕ ಎಲ್ಲ ಕನ್ನಡಿಗರು ಅದನ್ನು ಕನ್ನಡ ಧ್ವಜ ಎಂದು ಅಪ್ಪಿಕೊಂಡಿದ್ದಾರೆ. ಆದರೆ ಯಾವತ್ತೂ ಈ ಕನ್ನಡಧ್ವಜ ದೇಶದ ಏಕತೆಗೆ ಭಂಗ ತಂದ ಉದಾಹರಣೆ ಇಲ್ಲ. ಅಥವಾ ಅಂತಹ ಭಾವನೆಯನ್ನು ಯಾವ ಕನ್ನಡಿಗರಲ್ಲೂ ಈ ಧ್ವಜ ಹುಟ್ಟುಹಾಕಿಲ್ಲ. ರಾಷ್ಟ್ರಧ್ವಜಕ್ಕೆ ಕನ್ನಡಿಗರು ಕೊಡುವ ಗೌರವವೂ ಕಡಿಮೆಯಾಗಿಲ್ಲ. ರಾಷ್ಟ್ರಧ್ವಜಕ್ಕೆ ಕನ್ನಡಧ್ವಜ ಪರ್ಯಾಯ ಎಂದು ಭಾವಿಸಲು ಯಾವ ಕಾರಣಗಳೂ ಇಲ್ಲ.

‘ರಾಜ್ಯಕ್ಕೊಂದು ಪ್ರತ್ಯೇಕ ಧ್ವಜ ರೂಪಿಸಿ’ ಎಂದು 2009ರಲ್ಲಿ ಕನ್ನಡಪರ ಸಂಘಟನೆಗಳು ಒತ್ತಾಯಿಸಿದ್ದಾಗ ಆಗಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಅದನ್ನು ತಿರಸ್ಕರಿಸಿದ್ದರು. ಆದರೆ 2012ರಲ್ಲಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ನವೆಂಬರ್ 1ರಂದು ರಾಜ್ಯದ ಎಲ್ಲ ಸರ್ಕಾರಿ ಕಚೇರಿ ಮತ್ತು ಶಾಲಾ ಕಾಲೇಜುಗಳಲ್ಲಿ ಕನ್ನಡ ಧ್ವಜಾರೋಹಣವನ್ನು ಕಡ್ಡಾಯಗೊಳಿಸಿದ್ದರು. ಬಳಿಕ ಬಂದ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಸರ್ಕಾರ, ಕಡ್ಡಾಯ ಕನ್ನಡ ಧ್ವಜಾರೋಹಣವನ್ನು ರದ್ದುಗೊಳಿಸಿರುವುದಾಗಿ ಹೈಕೋರ್ಟ್‌ಗೆ ತಿಳಿಸಿತ್ತು. ಈಗ ಪ್ರಶ್ನೆ ಮತ್ತೆ ಮುನ್ನೆಲೆಗೆ ಬಂದಿದೆ. ರಾಜಕಾರಣಿಗಳು ಈ ವಿಷಯವಾಗಿ ಲಾಭ– ನಷ್ಟದ ಲೆಕ್ಕಾಚಾರ ಹಾಕುತ್ತಿರುವುದು ದುರದೃಷ್ಟಕರ. ಕನ್ನಡದ ಅಸ್ಮಿತೆಯ ವಿಷಯವನ್ನು ರಾಜಕೀಯ ಲೆಕ್ಕಾಚಾರದಲ್ಲಿ ವಿರೋಧಿಸುವುದು ಎಳ್ಳಷ್ಟೂ ಸರಿಯಲ್ಲ.

ಈಗಾಗಲೆ ಕರ್ನಾಟಕದಲ್ಲಿ ನಾಡಗೀತೆ ಇದೆ. ಇದರಿಂದ ರಾಷ್ಟ್ರಗೀತೆಯಾದ ಜನಗಣಮನಕ್ಕೆ ಅವಮಾನವಾಗಿದೆ ಎಂದು ಯಾರೂ ಭಾವಿಸಿಲ್ಲ. ಹೀಗಿರುವಾಗ ನಾಡಧ್ವಜಕ್ಕೆ ವಿರೋಧ ಮಾಡುವುದು ಹೇಗೆ ಸಮರ್ಥನೀಯ? ಜಮ್ಮು–ಕಾಶ್ಮೀರದಲ್ಲಿ ಪ್ರತ್ಯೇಕ ರಾಜ್ಯಧ್ವಜ ಇದೆ. ನಾಗಾಲ್ಯಾಂಡ್‌ನ ಜತೆಗೆ ಕೇಂದ್ರ ಸರ್ಕಾರ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ, ಅಲ್ಲಿಯೂ ರಾಜ್ಯ ಧ್ವಜವನ್ನು ರೂಪಿಸಲಾಗುತ್ತಿದೆ. ದೂರದ ಅಮೆರಿಕ, ಜರ್ಮನಿ ದೇಶಗಳಲ್ಲೂ ರಾಜ್ಯಗಳು ಪ್ರತ್ಯೇಕ ಧ್ವಜಗಳನ್ನು ಹೊಂದಿದ್ದು ಒಕ್ಕೂಟ ವ್ಯವಸ್ಥೆ ಪ್ರಬಲವಾಗಿಯೇ ಇದೆ.

ಭಾರತದ ಸಂವಿಧಾನವು ರಾಜ್ಯಗಳು ಪ್ರತ್ಯೇಕ ಅಧಿಕೃತ ಧ್ವಜವನ್ನು ಹೊಂದುವುದಕ್ಕೆ ವಿರೋಧ ಸೂಚಿಸಿಲ್ಲ ಎನ್ನುವುದು ಗಮನಾರ್ಹ. ಭಾಷಾವಾರು ಪ್ರಾಂತ್ಯರಚನೆಯ ಉದ್ದೇಶವೇ ಗಣರಾಜ್ಯ ಕಲ್ಪನೆಯನ್ನು ಬಲಪಡಿಸುವುದು. ರಾಜ್ಯಗಳು ತಮ್ಮ ಅಸ್ಮಿತೆಯನ್ನು ಬಲಪಡಿಸಿಕೊಂಡು ಸ್ವಾಯತ್ತೆ ಹೊಂದಿದಷ್ಟೂ ಕೇಂದ್ರ ಇನ್ನಷ್ಟು ಬಲಿಷ್ಠವಾಗುತ್ತದೆ. ಕನ್ನಡತನದ ಅಭಿಮಾನವನ್ನು ಸಾಂಕೇತಿಕವಾಗಿ ಪ್ರತ್ಯೇಕ ಧ್ವಜದ ಮೂಲಕ ವ್ಯಕ್ತಪಡಿಸಿದರೆ ಅದು ರಾಷ್ಟ್ರವಿರೋಧವಾಗುತ್ತದೆ ಎಂದು ಭಾವಿಸುವುದು ಅಪ್ರಬುದ್ಧ ಧೋರಣೆ. ಕೇಂದ್ರದ ನಾಯಕರು ಹೀಗೆ ರಾಜ್ಯಗಳ ಮೇಲೆ ಸವಾರಿ ಮಾಡಲು ಹೊರಟರೆ, ಅದೇ ಇನ್ನೊಂದು ರೀತಿಯಲ್ಲಿ ಪ್ರತ್ಯೇಕತಾವಾದಕ್ಕೆ ಕುಮ್ಮಕ್ಕು ಕೊಡುತ್ತದೆ. ಈಗಾಗಲೆ ಕರ್ನಾಟಕದಲ್ಲಿ ಹಿಂದಿಯ ಕಡ್ಡಾಯ ಹೇರಿಕೆಯ ಹಿಂಬಾಗಿಲ ಯತ್ನದ ಮೂಲಕ ಕೇಂದ್ರ ಸರ್ಕಾರ ಕನ್ನಡಿಗರ ಅಸ್ಮಿತೆಯನ್ನು ಕೆಣಕುತ್ತಿದೆ. ದೆಹಲಿ ನಾಯಕರು ಕನ್ನಡ ಧ್ವಜವನ್ನೂ ವಿರೋಧಿಸಿದರೆ, ಮುಂದೆ ಬೇರೆಯೇ ಅನಾಹುತಕ್ಕೆ ಕಾರಣವಾಗಬಹುದು. ಕನ್ನಡಧ್ವಜವನ್ನು ವಿರೋಧಿಸುವವರು ನಮ್ಮ ಸಂವಿಧಾನದ ಒಕ್ಕೂಟ ವ್ಯವಸ್ಥೆಯ ಸೂಕ್ಷ್ಮಗಳನ್ನು ಅರಿತುಕೊಂಡಿಲ್ಲ ಎನ್ನುವುದು ಸ್ಪಷ್ಟ. ನಾಡಧ್ವಜ ವಿವಾದವಾಗದಂತೆ ರಾಜ್ಯ ಸರ್ಕಾರ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ವಿವೇಚನೆ ಮತ್ತು ಎಚ್ಚರಿಕೆಯಿಂದ ಹೆಜ್ಜೆ ಇಡಲಿ.

■ ಬಿ.ಎಂ.ಹನೀಫ್

ಈಗಾಗಲೆ ಕರ್ನಾಟಕದಲ್ಲಿ ನಾಡಗೀತೆ ಇದೆ. ಇದರಿಂದ ರಾಷ್ಟ್ರಗೀತೆಯಾದ ಜನಗಣಮನಕ್ಕೆ ಅವಮಾನವಾಗಿದೆ ಎಂದು ಯಾರೂ ಭಾವಿಸಿಲ್ಲ. ಹೀಗಿರುವಾಗ ನಾಡಧ್ವಜಕ್ಕೆ ವಿರೋಧ ಮಾಡುವುದು ಹೇಗೆ ಸಮರ್ಥನೀಯ?

